19 ನೇ ಪ್ರವಾಸಿ ಭಾರತೀಯ ದಿವಸ್ ಸಮಾವೇಶ

19 ನೇ ಪ್ರವಾಸಿ ಭಾರತೀಯ ದಿವಸ (PBD) ಸಮಾವೇಶದ ವೆಬ್‌ಸೈಟ್ (pbdindia.gov.in) ಅನ್ನು ಗೌರವಾನ್ವಿತ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಮತ್ತು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಶ್ರೀ ಸುವೇಂದು ಅಧಿಕಾರಿಯವರು ನವೆಂಬರ್ 11, 2026 ರಂದು ನವದೆಹಲಿಯಲ್ಲಿ ಜಂಟಿಯಾಗಿ ಉದ್ಘಾಟಿಸಿದರು. ಪಶ್ಚಿಮ ಬಂಗಾಳ ಸರ್ಕಾರದ ಪಾಲುದಾರಿಕೆಯಲ್ಲಿ 19 ನೇ PBD ಸಮಾವೇಶವನ್ನು 2027 ರ ಜನವರಿ 7-9 ರವರೆಗೆ ಪಶ್ಚಿಮ ಬಂಗಾಳದ ಕೋಲ್ಕತ್ತಾದಲ್ಲಿ ನಡೆಸಲಾಗುತ್ತದೆ.

2. ಪ್ರವಾಸಿ ಭಾರತೀಯ ದಿವಸ ಸಮ್ಮೇಳನವು ಭಾರತ ಸರ್ಕಾರದ ಒಂದು ಪ್ರಮುಖ ಕಾರ್ಯಕ್ರಮವಾಗಿದ್ದು, ಇದು ಪ್ರಪಂಚದಾದ್ಯಂತ ನೆಲೆಸಿರುವ ಭಾರತೀಯ ವಲಸಿಗರೊಂದಿಗೆ ಸಂಪರ್ಕ ಸಾಧಿಸಲು ಒಂದು ಮಹತ್ವದ ವೇದಿಕೆಯನ್ನು ಒದಗಿಸುತ್ತದೆ. ವಾರ್ಷಿಕವಾಗಿ ಜನವರಿ 9 ರಂದು ಆಚರಿಸಲಾಗುವ ಪ್ರವಾಸಿ ಭಾರತೀಯ ದಿವಸವನ್ನು, ಮಹಾತ್ಮಾ ಗಾಂಧಿಯವರು ಜನವರಿ 9, 1915 ರಂದು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿರುವುದರ ಸ್ಮರಣೆಯಾಗಿ ಆಚರಿಸಲಾಗುತ್ತದೆ. 19 ನೇ PBD ಸಮಾವೇಶವು ಜಗತ್ತಿನಾದ್ಯಂತದ ಭಾರತೀಯ ವಲಸಿಗ ಸದಸ್ಯರನ್ನು ಅವರ ಸಾಧನೆಗಳನ್ನು ಆಚರಿಸಲು, ಭಾರತದೊಂದಿಗೆ ಅವರ ಸಂಬಂಧಗಳನ್ನು ಬಲಪಡಿಸಲು ಮತ್ತು ದೇಶದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಅವರ ನಿರಂತರ ತೊಡಗುವಿಕೆ ಮತ್ತು ಕೊಡುಗೆಗಾಗಿ ಮಾರ್ಗಗಳನ್ನು ಅನ್ವೇಷಿಸಲು ಒಟ್ಟುಗೂಡಿಸುತ್ತದೆ.

3. 19 ನೇ ಪ್ರವಾಸಿ ಭಾರತೀಯ ದಿವಸ ಸಮಾವೇಶದ ವಿಷಯ, 'ಮೂಲಗಳಿಗೆ ಹಿಂತಿರುಗುವುದು: ಭಾರತೀಯ ಮೂಲದವರನ್ನು ಭಾರತದೊಂದಿಗೆ ಸಂಪರ್ಕಿಸುವುದು' ಎಂದಾಗಿದೆ. ಇದು ಭಾರತೀಯ ವಲಸಿಗರ ಆಳವಾದ ನಾಗರಿಕ, ಸಾಂಸ್ಕೃತಿಕ ಮತ್ತು ಭಾವನಾತ್ಮಕ ಬಂಧಗಳನ್ನು ಅವರ ಮಾತೃಭೂಮಿಯೊಂದಿಗೆ ಆಚರಿಸುತ್ತದೆ ಮತ್ತು ಈ ಶಾಶ್ವತ ಸಂಪರ್ಕಗಳನ್ನು ಮತ್ತಷ್ಟು ಬಲಪಡಿಸಲು ಪ್ರಯತ್ನಿಸುತ್ತದೆ. ಇದು ಮುಂದಿನ ಪೀಳಿಗೆಯ ಭಾರತೀಯರಿಗೆ ತಮ್ಮ ಬೇರುಗಳನ್ನು ಮರುಶೋಧಿಸಲು, ಭಾರತದೊಂದಿಗೆ ಮರುಸಂಪರ್ಕಿಸಲು ಮತ್ತು ಸಮಕಾಲೀನ ಭಾರತದೊಂದಿಗೆ ತಮ್ಮ ತೊಡಗುವಿಕೆಯನ್ನು ಆಳಗೊಳಿಸಲು ಅರ್ಥಪೂರ್ಣ ಅವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ.

4. ಮೂರು ದಿನಗಳ ಸಮಾವೇಶವು ಯುವ ಪ್ರವಾಸಿ ಭಾರತೀಯ ದಿವಸದೊಂದಿಗೆ ಪ್ರಾರಂಭವಾಗುತ್ತದೆ. ಗೌರವಾನ್ವಿತ ಪ್ರಧಾನಮಂತ್ರಿ, ಶ್ರೀ ನರೇಂದ್ರ ಮೋದಿ ಅವರು ಸಮಾವೇಶವನ್ನು ಉದ್ಘಾಟಿಸಲಿದ್ದಾರೆ. ಭಾರತದ ಗೌರವಾನ್ವಿತ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರು, ಸಮಾರೋಪ ಅಧಿವೇಶನದ ಅಧ್ಯಕ್ಷತೆ ವಹಿಸಲಿದ್ದಾರೆ ಮತ್ತು ಪ್ರತಿಷ್ಠಿತ ಪ್ರವಾಸಿ ಭಾರತೀಯ ಸಮ್ಮಾನ್ ಪ್ರಶಸ್ತಿಗಳನ್ನು ನೀಡಲಿದ್ದಾರೆ. ಈ ಪ್ರಶಸ್ತಿಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಭಾರತೀಯ ವಲಸಿಗ ಸದಸ್ಯರ ಅಸಾಧಾರಣ ಕೊಡುಗೆಗಳನ್ನು ಮತ್ತು ಜಾಗತಿಕ

ಸಮುದಾಯದೊಂದಿಗೆ ಭಾರತದ ತೊಡಗುವಿಕೆಯನ್ನು ಬಲಪಡಿಸುವಲ್ಲಿ ಅವರ ಪಾತ್ರವನ್ನು ಗುರುತಿಸುತ್ತವೆ.

5. PBD ವೆಬ್‌ಸೈಟ್‌ನೊಂದಿಗೆ, PBD ವಿಶೇಷ, ಭಾರತವನ್ನು ತಿಳಿಯಿರಿ (BKJ) ಕ್ವಿಜ್ ಅನ್ನು ಕೂಡ ಪ್ರಾರಂಭಿಸಲಾಗಿದೆ. ಪರಿಷ್ಕೃತ ಕ್ವಿಜ್ ಭಾರತೀಯರು ಮತ್ತು ವಿದೇಶಿಗರ ನಡುವೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಲು ಇತ್ತೀಚಿನ ಗೇಮಿಂಗ್ ತಂತ್ರಜ್ಞಾನವನ್ನು ಬಳಸುತ್ತದೆ, ಇದು ಭಾಗವಹಿಸುವವರನ್ನು ಭಾರತದ ಪರಂಪರೆ, ಸಂಸ್ಕೃತಿ, ಕಲೆ ಮತ್ತು ಸಮಕಾಲೀನ ಸಾಧನೆಗಳೊಂದಿಗೆ ಸಂಪರ್ಕಿಸುತ್ತದೆ. BKJ ಕ್ವಿಜ್ BharatVerse ಆ್ಯಪ್ ಮತ್ತು ವೆಬ್‌ಸೈಟ್‌ನಲ್ಲಿ(www.bkjquiz.com) ಲಭ್ಯವಿದೆ. ಇದು ಕ್ವಿಜ್‌ಗಳು, ಪಜಲ್‌ಗಳು, ಕ್ಯಾಸ್‌ವರ್ಡ್‌ಗಳು, ವರ್ಡ್ ಸರ್ಚ್, ಗೆಸ್ಸಿಂಗ್ ಗೇಮ್‌ಗಳು ಮತ್ತು ಇನ್ನೂ ಹೆಚ್ಚಿನ ಇಂಟರಾಕ್ಟಿವ್ ಮಾಡ್ಯೂಲ್‌ಗಳನ್ನು ಒಳಗೊಂಡಿರುವ "24x7 ಸಕ್ರಿಯವಾಗಿರುವ" ಡಿಜಿಟಲ್ ಸಾರ್ವಜನಿಕ ರಾಜತಾಂತ್ರಿಕ ವೇದಿಕೆಯಾಗಿದೆ. PBD ವಿಶೇಷ ಕ್ವಿಜ್ 2026 ರ ನವೆಂಬರ್ 11 ರಿಂದ ಡಿಸೆಂಬರ್ 20 ರವರೆಗೆ ನಡೆಯಲಿದೆ. ಮೂರು ವಿಭಾಗಗಳಲ್ಲಿನ ವಿಜೇತರಿಗೆ — ಅನಿವಾಸಿ ಭಾರತೀಯರು (NRIs), ಭಾರತೀಯ ಮೂಲದ ವ್ಯಕ್ತಿಗಳು (PIOs) ಮತ್ತು ವಿದೇಶಿಯರು — ಭಾರತದಲ್ಲಿ 10 ದಿನಗಳ ಅನುಭವಾತ್ಮಕ ಪ್ರವಾಸಕ್ಕೆ ಆಹ್ವಾನ ನೀಡಲಾಗುವುದು ಮತ್ತು ಅವರು ಕೋಲ್ಕತ್ತಾದಲ್ಲಿ ನಡೆಯುವ PBD ಸಂಭ್ರಮಾಚರಣೆಗಳಲ್ಲಿಯೂ ಭಾಗವಹಿಸಲಿದ್ದಾರೆ.

6. PBD ವೆಬ್‌ಸೈಟ್ (pbdindia.gov.in) ಪ್ರಾರಂಭವು ಸಮಾವೇಶದಲ್ಲಿ ಭಾಗವಹಿಸಲು ಆನ್‌ಲೈನ್ ನೋಂದಣಿಗಳ ಪ್ರಾರಂಭವನ್ನು ಸೂಚಿಸುತ್ತದೆ. ಈ ವೆಬ್‌ಸೈಟ್, ಸಮ್ಮೇಳನದಲ್ಲಿ ಭಾಗವಹಿಸಲು ಉದ್ದೇಶಿಸಿರುವವರಿಗೆ ಸಮಗ್ರ ಮಾಹಿತಿ ಮತ್ತು ನೆರವು ನೀಡುವ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. ಇದು ಸಮ್ಮೇಳನದ ವಿವರಗಳು, ಕಾರ್ಯಕ್ರಮದ ರೂಪುರೇಷೆಗಳು, ನೋಂದಣಿ ಪ್ರಕ್ರಿಯೆಗಳು, ವಸತಿ ವ್ಯವಸ್ಥೆ, ಸಾರಿಗೆ ಹಾಗೂ ಭಾಗವಹಿಸುವಿಕೆಗೆ ಅಗತ್ಯವಾದ ಇತರ ಸಂಬಂಧಿತ ವ್ಯವಸ್ಥೆಗಳ ಕುರಿತಾದ ಮಾಹಿತಿಯನ್ನು ಒದಗಿಸುತ್ತದೆ.

ನವದೆಹಲಿ

ನವೆಂಬರ್ 11, 2026